೧	೨	೩	೪
ಹುಕ್ಕೇರಿ	೧) ಕನ್ನಡ ಗಂಡು ಮಕ್ಕಳ ಶಾಲೆ' ಶಿರಹಟ್ಟಿ	೨.೦೦	೭,೦೦೦-೦೦
	೨) ಕನ್ನಡ ಗಂಡು ಮಕ್ಕಳ ಶಾಲೆ, ರಕ್ಷಿ	೨.೦೦	೭,೦೦೦-೦೦
	೩) ಮರಾಠಿ ಗಂಡು ಮಕ್ಕಳ ಶಾಲೆ ಅಲೂರ	೨.೦೦	೭,೦೦೦-೦೦
	೪) ನಿಡಸೂಸಿ ಹೈಸ್ಕೂಲ್, ನಿಡಸೋಸಿ	೨.೦೦	೭,೦೦೦-೦೦
	೫) ಕಲಾ ಮತ್ತು ವಾಣಿಜ್ಯ ಕಾಲೇಜ್ ಸಂಕೇಶ್ವರ	೨.೦೦	೭,೦೦೦-೦೦
	೬) ಕನ್ನಡ ಗಂಡು ಮಕ್ಕಳ ಶಾಲೆ; ಯರಗಟ್ಟಿ	೨.೦೦	೭,೦೦೦-೦೦
ಬೈಲಹೊಂಗಲ	೧) ಕನ್ನಡ ಗಂಡು ಮಕ್ಕಳ ಶಾಲೆ, ಮುರಕಿಬಾಂವಿ	೨.೦೦	೭,೦೦೦-೦೦
ಸೌಂದತ್ತಿ	೧) ಕನ್ನಡ ಗಂಡು ಮಕ್ಕಳ ಶಾಲೆ, ಹೊಸೂರ	೨.೦೦	೭,೦೦೦-೦೦

ಬಳ್ಳಾರಿಜಿಲ್ಲೆಯಲ್ಲಿ ಕರಡಿಗಳ ಹಾವಳಿ

೩೨೪ (೬೭೯) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಳ್ಳಾರಿ ಜಿಲ್ಲೆಯ ಹಳೆದರೋಜಿ ಮತ್ತು ದೇವಲಾಪುರಗಳ ಮಧ್ಯ ಕರಡಿ ಹಾವಳಿಯಿದ್ದು ಇತ್ತೀಚೆಗೆ ಕರಡಿಯೊಂದು ಹಗಲು ಹೊತ್ತಿನಲ್ಲೇ ಒಬ್ಬನನ್ನು ಸಾಯಿಸಿದ್ದು ನಿಜವೇ ?

ಆ) ಆ ಭಾಗದ ಜನರಿಗೆ ಕರಡಿ ಹಾವಳಿಯಿಂದ ತಪ್ಪಿಸಲು ಸರಕಾರದವರು ಈಗಲಾದರೂ ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ನಿಜ.

ಆ) ಈ ಭಾಗದಲ್ಲಿ ಕರಡಿ ಹಾವಳಿ ತಪ್ಪಿಸಲು ವಿದ್ಯುತ್ ತಂತಿ ಬೇಲಿಯನ್ನು ಹಾಕಿಸಲು ಯೋಜನೆ ಹಮ್ಮಿಕೊಳ್ಳಲಾಗುತ್ತಿದೆ. ಸುತ್ತಲಿನ ಅರಣ್ಯ ಸಿಬ್ಬಂದಿಗಳಿಗೆ ಕರಡಿಯ ಹಾವಳಿಯ ಸುದ್ದಿ ಬಂದಾಗ ಜನರನ್ನು ಒಟ್ಟುಗೂಡಿಸಿ ಕರಡಿಯನ್ನು ಓಡಿಸಲು ಕ್ರಮ ತೆಗೆದುಕೊಳ್ಳಲು ಆದೇಶಿಸಿದೆ.

ಅನುದಾನರಹಿತ ಆಂಗ್ಲ ಮಾಧ್ಯಮ ಶಾಲೆಗಳು

೩೨೫ (೭೧೬) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ಕೇಂದ್ರ ಸರ್ಕಾರದ ಶಿಕ್ಷಣ ಮಂಡಳಿಯಿಂದ ಮಾನ್ಯತೆ ಪಡೆಯಲಿರುವ (ಕೇಂದ್ರದ ಪಠ್ಯಪುಸ್ತಕಗಳನ್ನೊಂದಿರುವ) ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಿ ಎನ್.ಒ.ಸಿ. ಗಾಗಿ ಕೋರಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು ?

ಆ) ಸದ್ರಿ ಶಾಲೆಗಳಿಗೆ ಎನ್.ಒ.ಸಿ, ಕೊಡಲು ಸರ್ಕಾರವು ಅನುಸರಿಸುವ ನೀತಿ ಏನು ?